**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ**

**ದಿನಾಂಕ 22 ನೇ ಆಗಸ್ಟ್ - 2022**

**- ಉಪಸ್ಥಿತರು -**

**ಶ್ರೀ. ಬಿ. ಕೇಶವಮೂರ್ತಿ,** ಬಿ.ಎ., ಎಲ್ ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು ಬಂಗಾರಪೇಟೆ.

**ಅಸಲು ದಾವೆ ಸಂಖ್ಯೆ 335/2014**

ಮಧ್ಯಂತರ ಅರ್ಜಿ 8

ಅರ್ಜಿದಾರರು/ವಾದಿಃ

ಜೆ.ವಿ.ರತ್ನಮ್ಮ, 60 ವರ್ಷ
ಕೋಂ ಲೇಟ್ ಶ್ರೀನಿವಾಸ ಗೌಡ,
ವಾಸಃ ತೋಟದಮನೆ,
ಶ್ರೀನಿವಾಸ ಗೌಡ ಲೇಔಟ್,
ವಿಜಯನಗರ, ಬಂಗಾರಪೇಟೆ ಟೌನ್.

ವಿರುದ್ಧ

ಎದುರುದಾರರು/ಪ್ರತಿವಾದಿಗಳುಃ

1. ಸಿ.ರಾಜು, 45 ವರ್ಷ
ಬಿನ್ ಚಿನ್ನಪ್ಪ ,

2. ಅಭಿರಾಮಿ, 40 ವರ್ಷ
ಕೋಂ ಸಿ.ರಾಜು

3. ಸಿ.ಕುಮಾರ್, 40 ವರ್ಷ
ಬಿನ್ ಲೇಟ್ ಚಿನ್ನಪ್ಪ ,

ವಾಸಃ ತೋಟದಮನೆ,
ಶ್ರೀನಿವಾಸ ಗೌಡ ಲೇಔಟ್,
ವಿಜಯನಗರ, ಬಂಗಾರಪೇಟೆ ಟೌನ್.

**: ಮಧ್ಯಂತರ ಅರ್ಜಿ 8 ರ ಮೇಲೆ ಆದೇಶ :**

ವಾದಿಯ ಪರ ವಕೀಲರು ಮಧ್ಯಂತರ ಅರ್ಜಿ 8 ನ್ನು ಸಿ.ಪ್ರ.ಸಂ. ಕ್ರಮಾದೇಶ 26 ನಿಯಮ 09 ರ ಅನ್ವಯ ಸಲ್ಲಿಸಿ, ಈ ಪ್ರಕರಣದಲ್ಲಿ ದಾವಾ ಸ್ವತ್ತು ಸರ್ವೇನಂಬರ್ 5/1 ಎ ನ್ನು ಸ್ಥಳ ಪರಿಶೀಲನೆ ಮಾಡಿ ಒತ್ತುವರಿ ಜಾಗವನ್ನು ಗುರುತಿಸಿ ವರದಿ ಸಲ್ಲಿಸಲು ತಾಲ್ಲೂಕು ಸರ್ವೇಯರ್ ನ್ನು ಕಮೀಷನರ್ ಆಗಿ ನೇಮಕ ಮಾಡುವಂತೆ ಕೋರಿರುತ್ತಾರೆ.

2) ವಾದಿಯು ತಮ್ಮ ಅರ್ಜಿ ಮತ್ತು ಅದರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ದಾವಾ ಸರ್ವೇನಂಬರ್ 5/1 ಎ ವಿಸ್ತೀರ್ಣ 25 ಗುಂಟೆ ಇದ್ದು ಅದರಲ್ಲಿ 5X35 ಅಡಿ ಜಾಗವನ್ನು ಪ್ರತಿವಾದಿಯರು ಒತ್ತುವರಿ ಮಾಡಿಕೊಂಡಿದ್ದು, ಸದರಿ ಒತ್ತುವರಿ ಜಾಗವನ್ನು ಗುರುತಿಸಲು ಕಮೀಷನರ್ ರವರನ್ನು ನೇಮಕ ಮಾಡುವಂತೆ ಕೋರುತ್ತಾರೆ.

3) 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಕಮಿಷನರ್ ನೇಮಕ ಮಾಡುವುದು ಅಗತ್ಯ ಇರುವುದಿಲ್ಲ ಎಂದು ವಾದಿಯರು ಸಲ್ಲಿಸಿದ ಈ ಅರ್ಜಿಯು ಕಾನೂನು ಮತ್ತು ಈ ಪ್ರಕರಣದ ಸಂಗತಿಗಳ ಅನ್ವಯ ಊರ್ಜಿತವಾಗಿರುವುದಿಲ್ಲವೆಂದು, ಈಗಾಗಲೇ ವಾದಿ ಮತ್ತು ಪ್ರತಿವಾದಿಗಳ ವಿಚಾರಣೆ ಮುಗಿದಿದ್ದು, ಈ ಹಂತದಲ್ಲಿ ಕಮೀಷನರ್ ರವರನ್ನು ನೇಮಕ ಮಾಡುವ ಅಗತ್ಯ ಇರುವುದ್ದಿಲ್ಲ ಎಂದು, ವಾದಿ ತಮ್ಮ ಪ್ರಕರಣವನ್ನು ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಮುಖಾಂತರ ಸಾಬೀತು ಪಡಿಸಬೇಕಾಗಿದ್ದು , ಕಮೀಷನರ್ ರವರನ್ನು ನೇಮಕ ಮಾಡಿ ಸಾಕ್ಷ್ಯವನ್ನು ಸಂಗ್ರಹಿಸಲು ಅವಕಾಶ ಮಾಡಿಕೊಡಬಾರದು ಎಂದು ಮೇಲ್ಕಂಡ ಎಲ್ಲಾ ಕಾರಣಗಳಿಂದ ವಾದಿ ಪರ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸುವಂತೆ ಕೋರುತ್ತಾರೆ.

4) ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

5) ವಾದಿಯ ಅರ್ಜಿ, ಪ್ರತಿವಾದಿ ತಕರಾರು ಪತ್ರ ಮತ್ತು ವಾದವನ್ನು ಆಲಿಸಿದ ನಂತರ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**ಃ ಅಂಶಗಳು ಃ**

1 ಅರ್ಜಿದಾರರು ಸಿ.ಪ್ರ.ಸಂ. ಕ್ರಮಾದೇಶ 26 ನಿಯಮ 9 ರ ಅನ್ವಯ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಿ ಕಮೀಷನರ್ ರವರನ್ನು ನೇಮಕ ಮಾಡುವ ಅವಶ್ಯಕತೆ ಇದೆ ಎಂದು ಅರ್ಜಿದಾರರು ಸಾಭೀತುಪಡಿಸುವರೇ?

2 ಯಾವ ಆದೇಶ ಅಥವಾ ಪರಿಹಾರ ?

6) ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ-1 | ಃ | ಸಕಾರಾತ್ಮಕವಾಗಿ. |
| ಅಂಶ-2 | ಃ | ಯಾವ ಆದೇಶ. |

**ಃ ಕಾರಣಗಳು ಃ**

7) **ಅಂಶ- 1** ಃ- ವಾದಿಯು ಈ ದಾವೆಯನ್ನು ತಾನು ದಾವಾ ಸ್ವತ್ತಿನ ಮಾಲೀಕ ಎಂದು ಘೋಷಣೆ ಮಾಡುವಂತೆ ಮತ್ತು ಪ್ರತಿವಾದಿಯಿಂದ ಒತ್ತುವರಿ ಮಾಡಿಕೊಂಡಿರುವ 5X35 ಅಡಿ ಜಾಗವನ್ನು ಬಿಡಿಸಿ ಕೊಡುವಂತೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ದಾವಾ ಸರ್ವೆನಂಬರ್ 5/1 ಎ ರಲ್ಲಿ 25 ಗುಂಟೆ ಇದ್ದು ಅದರಲ್ಲಿ 5X35 ಅಡಿ ಜಾಗವನ್ನು ಪ್ರತಿವಾದಿಯರು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ವಾದಿ ಪ್ರತಿಪಾದಿಸುತ್ತಾರೆ. ಪ್ರತಿವಾದಿಯರು ಸದರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತಿಳಿಯಲು ಕಮೀಷನರ್ ರವರ ನೇಮಕ ಮಾಡುವುದು ಸೂಕ್ತ ಕ್ರಮವಾಗಿರುತ್ತದೆ . ಕಮೀಷನರ್ ರವರ ವರದಿ ಮತ್ತು ನಕಾಶೆ ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ಸಹಾಯಕವಾಗುತ್ತದೆ.

ಆ ಕಾರಣದಿಂದ ಅರ್ಜಿಯನ್ನು ಮಾನ್ಯ ಮಾಡುವುದು ಸೂಕ್ತವೆಂದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅದರಂತೆ ಅಂಶ.1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

9) ಅಂಶ. 2 ಃ- ಮೇಲ್ಕಂಡ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸುತ್ತೇನೆ.

## ಃ ಆದೇಶ ಃ

ಮಧ್ಯಂತರ ಅರ್ಜಿ 8 ನ್ನು ಅಂಗೀಕರಿಸಲಾಗಿದೆ.

ತಾಲ್ಲೂಕು ಸರ್ವೇಯರ್ ಬಂಗಾರಪೇಟೆರವರನ್ನು ಈ ಪ್ರಕರಣದಲ್ಲಿ ದಾವಾ ಸ್ವತ್ತುಗಳ ಸಂಬಂಧ ಕಮೀಷನರ್ ಆಗಿ ನೇಮಕ ಮಾಡಲಾಗಿದ್ದು, ಸದರಿ ಕಮೀಷನ್ ರವರು ದಾವಾ ಸ್ವತ್ತನ್ನು ಅಳತೆ ಮಾಡಿ, ಒತ್ತುವರಿಯ ಬಗ್ಗೆ ಪರಿಶೀಲಿಸಿ ನಕಾಶೆಯೊಂದಿಗೆ ಗುರುತಿಸಿ ವರದಿ ಸಲ್ಲಿಸತಕ್ಕದ್ದು.

ವಾದಿಯು ನ್ಯಾಯಾಲಯದ ಮೇಲ್ಕಂಡ ನಿಯೋಗಿಯ ಶುಲ್ಕ ರೂ. *2,000/-* ನ್ನು ಭರಿಸತಕ್ಕದ್ದು. ಅರ್ಜಿದಾರರು ನ್ಯಾಯಾಲಯದ ನಿಯೋಗಿ ವಾರೆಂಟ್ ಜಾರಿ ಶುಲ್ಕ ಪಾವತಿಸತಕ್ಕದ್ದು.

ವಾದಿ ಎಲ್ಲಾ ಅಗತ್ಯ ಕ್ರಮಗಳನ್ನು ಈ ಆದೇಶವಾದ 10 ದಿನಗಳ ಒಳಗಾಗಿ ತೆಗೆದುಕೊಳ್ಳತಕ್ಕದ್ದು. ವಾದಿ ಮತ್ತು ಪ್ರತಿವಾದಿಗಳು ಮೆಮೊ ಆಫ್ ಇನ್ಸಟ್ರಕ್ಷನ್‌ಗಳನ್ನು 10 ದಿನಗಳ ಒಳಗೆ ಕಚೇರಿಗೆ ಸಲ್ಲಿಸತಕ್ಕದ್ದು.

ನ್ಯಾಯಾಲಯದ ನಿಯೋಗಿಯು ನಿಯೋಗಿ ವಾರೆಂಟ್ ತಲುಪಿದ ನಂತರ ಶೀಘ್ರವಾಗಿ ಕ್ರಮಗಳನ್ನು ತೆಗೆದುಕೊಂಡು ವರದಿ ಮತ್ತು ನಕಾಶೆಯನ್ನು ಸಲ್ಲಿಸತಕ್ಕದ್ದು.

ಕರೆಯಿರಿಃ ***01.10.2022***

Sd/-
**(ಬಿ. ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.